**ದಿನಾಂಕಃ 07.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

1. ನಾನು ಪ್ರಸ್ತುತ ಕನಕಪುರ ಶಾಖೆಯಲ್ಲಿ 2 ವರ್ಷಗಳಿಂದ ಬ್ರಾಂಚ್ ಮ್ಯಾನೇಜರ್ ಆಗಿ ಕರ್ತವ್ಯ ಮಾಡುತ್ತಿದ್ದೇನೆ. ನಮ್ಮ ಕಚೇರಿಯ ವಿಳಾಸ ರಾಜರಾವ್ ಬೀದಿ, ಸಿಹಿಮನೆ, ಕನಕಪುರ ಟೌನ್ ಆಗಿರುತ್ತದೆ. ಸರ್ವೆ ನಂ.75 ರಲ್ಲಿ ಒಟ್ಟು ವಿಸ್ತೀರ್ಣ 449.20 ಗುಂಟೆ ಇರುತ್ತದೆ. ಇದರಲ್ಲಿ ನಮ್ಮದು 14 ಎಕರೆ 20 ಗುಂಟೆ ಆಗಿರುತ್ತದೆ. ನಾವು ಸರ್ಕಾರದಿಂದ ಲೀಸ್ ಮುಖಾಂತರ ಪಡೆದಿದ್ದು ಈ ಬಗ್ಗೆ ಆರ್ ಟಿ ಸಿ ಯಲ್ಲಿ ನಮೂದು ಆಗಿರುವುದಿಲ್ಲ. ನಮಗೆ ಲೀಸ್ ಆಗಿದ್ದು ದಿನಾಂಕ 14.01.1988 ರಲ್ಲಿ. ಲೀಸ್ ನ್ನು ಕ್ವಾರೆ ಮಾಡುವ ಸಂಬಂಧ ಪಡೆದುಕೊಳ್ಳಲಾಗಿತ್ತು ಎಂದರೆ ಸರಿ. ನಮಗೆ ಲೀಸ್ ನ್ನು 10 ವರ್ಷಗಳ ಅವಧಿಗೆ ಕೊಟ್ಟಿದ್ದರು ಅಂದರೆ 1988 ರಿಂದ 1998 ರವರಗೂ ಅಂದರೆ ಸಾಕ್ಷಿಯು ಮತ್ತೆ ರಿನಿವಲ್ ಮಾಡಿಸಿಕೊಂಡಿದ್ದೇವೆಂದು ನುಡಿಯುತ್ತಾರೆ. ಈ ಸಂಬಂಧ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. 1998 ರಲ್ಲಿ ಮತ್ತೆ 10 ವರ್ಷಗಳವರೆಗೆ ರಿನಿವಲ್ ಮಾಡಿಸಿಕೊಂಡಿರುತ್ತೇವೆ ಅಂದರೆ 2008 ರವರೆಗು ಪಡೆದುಕೊಂಡಿರುತ್ತೇವೆ. ನಂತರ ಮತ್ತೆ ರಿನಿವಲ್ ಮಾಡಿಕೊಂಡಿದ್ದು ದಾಖಲಾತಿಯನ್ನು ಹಾಜರು ಪಡಿಸಿರುತ್ತೇವೆ.

2. ದಾಖಲಾತಿಗಳನ್ನು ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ತೋರಿಸಿ ಅದರಲ್ಲಿ ರಿನಿವಲ್ ಮಾಡಿಸಿಕೊಂಡಿರುವ ದಾಖಲಾತಿ ಯಾವುದು ಎಂದು ಕೇಳಿದಾಗ ಹಾಜರು ಪಡಿಸಿರುತ್ತೇವೆ ಆದರೆ ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. 2008 ರ ಮೇಲೆ ನಮಗೆ ಸಬಂದಿಸಿದಂತೆ ಲೈಸನ್ಸ ರಿನಿವಲ್ ಆಗಿರುವುದಿಲ್ಲ ಹಾಗೂ ನಾವು ಯಾವುದೇ ಕ್ವಾರೆ ಕೆಲಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು Technical problem ಇಂದ ಕ್ವಾರೆ ನಡೆಸುತ್ತಿಲ್ಲ ಆದರೆ ಕ್ವಾರೆ ರಿನಿವಲ್ ಆಗಿರುತ್ತದೆಂದು ನುಡಿ

ಯುತ್ತಾರೆ. ನಾವು ಕ್ವಾರೆ ನಡೆಸುತ್ತಿದ್ದಾಗ ಶೆಡ್ ಹಾಕಿದ್ದು ಮಿಷಿನರಿಗಳು ಹಾಗೂ ಲೇಬರ್ ಗಳು ಕೂಡ ಇದ್ದರು. 2008 ರ ಮೇಲೆ ಇವು ಯಾವುದು ಇಲ್ಲ ಎಂದರೆ ಸರಿ. 2008 ರ ನಂತರ ಅದು ಖಾಲಿ ಜಾಗವಾಗಿ ಉಳಿದಿರುತ್ತದೆಂದರೆ ಸರಿ.

3. ನಿಪಿ-2 ರಂತೆ ಸದರಿ ಜಾಗದಲ್ಲಿ ಕ್ವಾರೆ ಕೆಲಸ ನಡೆಯದೇ ಇದ್ದಲ್ಲಿ ಪರವಾನಿಗೆ ರದ್ದಾಗುತ್ತದೆಂದು ನಮೂದಾಗಿರುತ್ತದೆಂದರೆ ಸರಿ. ದಾವಾ ಸ್ವತ್ತಿನ ಚಕ್ಕುಬಂದಿ ಉತ್ತರಕ್ಕೆ ಸರ್ವೆ ನಂ.75 ಮತ್ತು 72, ಪಶ್ಚಿಮಕ್ಕೆ ಸರ್ವೆ ನಂ 75 ಮತ್ತು 76, ಪೂರ್ವಕ್ಕೆ ಸರ್ವೆ ನಂ 75 ಮತ್ತು ದಕ್ಷಿಣಕ್ಕೆ ಸರ್ವೆ ನಂ75 ಇರುತ್ತದೆ. ನಾನು ಹೇಳಿದ ಚಕ್ಕುಬಂದಿಯ ಸುತ್ತಮುತ್ತಲೂ ರೈತರಿಗೆ ಅಲಾಟ್ ಆಗಿದ್ದು ಅವರು ವ್ಯವಸಾಯ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ದುಂಡ ಶೆಟ್ಟಿ ಹಾಗೂ ದುಂಡಮಾದಶೆಟ್ಟಿ ಇವರಿಗೆ 1942 ರಲ್ಲಿ ಇದೇ ಸರ್ವೆ ನಂಬರ್ ನಲ್ಲಿ ತಲಾ 2 ಎಕರೆಯಂತೆ ಸರ್ಕಾರದಿಂದ ಜಮೀನು ಮಂಜೂರಾಗಿರುತ್ತದೆಂದರೆ ಸಾಕ್ಷಿಯು ಆ ರೀತಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಇವರುಗಳ ಜೊತೆ ಇತರೆ ರೈತರಿಗೂ ಸಹ ಅಲ್ಲಿ ಸರ್ಕಾರದಿಂದ ಜಾಗ ಮಂಜೂರಾಗಿದ್ದು ಅದರಂತೆ ಅವರು ವ್ಯವಸಾಯ ಮಾಡಿಕೊಂಡು ಇದ್ದರೂ ಸಹಿತ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿರುತ್ತೇವೆಂದರೆ ಸರಿಯಲ್ಲ.

4. ಪ್ರಸ್ತುತ ದಾವಾ ಸ್ವತ್ತು ಬನ್ನೇರುಘಟ್ಟ wildlife reservation zone ವ್ಯಾಪ್ತಿಗೆ ಬರುತ್ತದೆಂದರೆ ಸಾಕ್ಷಿಯು ಬರುತ್ತದೆ ಆದರೆ 1 ಕಿ.ಮೀಟರ್ ಅಂತರದಲ್ಲಿ ಮಾಡಬಾರದು ಎಂಬಂತೆ ಆಗಿರುತ್ತದೆಂದು ನುಡಿಯುತ್ತಾರೆ. ಈ ರೀತಿ 2011-12 ರಲ್ಲಿ ಸರ್ಕಾರ ಆದೇಶ ಮಾಡಿರುತ್ತದೆಂದರೆ ಸಾಕ್ಷಿಯು 2020 ರಲ್ಲಿ ಮಾಡಿರುತ್ತದೆಂದು ನುಡಿಯುತ್ತಾರೆ. ಸರ್ಕಾರವೂ 2011-12 ರಲ್ಲೇ ಆದೇಶ ಮಾಡಿದ್ದು ಹಾಗೂ ಆ ಕಾರಣದ ಮೇರೆಗೆ ನಮಗೆ 2008 ರ ನಂತರ ಪರವಾನಿಗೆಯೂ ರಿನಿವಲ್ ಆಗಿರುವುದಿಲ್ಲ ಎಂದರೆ ಸರಿ. 2008 ರ ನಂತರ ನಮಗೆ ಲೀಸ್ ರಿನಿವಲ್ ಆಗದೇ ಇರುವ ಕಾರಣ ನಾವು ಅಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು 2008 ರಿಂದ 2018 ರವರೆಗೂ ನಾವೇ ಸ್ವಾಧೀನದಲ್ಲಿದ್ದು ಲೀಸ್ ರಿನಿವಲ್ ಆಗಿರುತ್ತದೆಂದು ನುಡಿಯುತ್ತಾರೆ. 2018 ರ ನಂತರ

ನಾವು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಇದ್ದೇವೆಂದು ನುಡಿಯುತ್ತಾರೆ. ನಾವು ಸ್ವಾಧೀನದಲ್ಲಿ ಇದ್ದೇವೆ ಆದರೆ ಈ ಸಂಬಂಧ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ. ನಾವು ಸ್ವಾಧೀನದಲ್ಲಿ ಇರದೇ ಇದ್ದರೂ ಸಹಿತ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ವಿರುದ್ದ ಅರಣ್ಯ ಇಲಾಖೆಯವರು ಎಫ್ ಒ ಸಿ 94/2006-07 ಎಂಬಂತೆ ಪ್ರಕರಣ ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ಅದರಲ್ಲಿ ನಮ್ಮ ಕಂಪನಿಯ ವಿರುದ್ದ ನಾವು ಅರಣ್ಯ ಜಾಗವನ್ನು ಒತ್ತುವರಿ ಮಾಡಿಕೊಂಡು ಇತರರಿಗೆ ತೊಂದರೆ ಮಾಡುತ್ತಿದ್ದೇವೆಂದು ದೂರು ದಾಖಲಿಸಿದ್ದರು ಎಂದರೆ ಸರಿಯಲ್ಲ. ನಾವು ಕ್ವಾರೆ ನಡೆಸುವ ಸಂಬಂಧ ರೆವಿನ್ಯೂ ಇಲಾಖೆಯಿಂದ ಯಾವುದೆ ಎನ್ ಒ ಸಿ ಪಡೆದಿಲ್ಲ ಎಂದರೆ ಪಡೆದಿರುತ್ತೇವೆಂದು ನುಡಿಯುತ್ತಾರೆ. ಈ ಸಂಬಂಧ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರಿದ ವಾಟೀ ಸವಾಲಿಗೆ ಸಮಯ ಕೋರಿದ್ದು ಕೊನೆಯ ಅವಕಾಶವಾಗಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**